# ರಾಜಮಾರ್ಗ

ಎಲ್ಲ ಕವಿಗಳಿಗೂ, ದಾರ್ಶನಿಕರಿಗೂ ಒಮ್ಮೊಮ್ಮೆ, ಆಳರಸರು ಜನರ ಹಕ್ಕುಗಳನ್ನು ದಮನಿಸಲು ನಡೆಸುವ ಹಿಂಸೆ ಮತ್ತು ಕ್ರೌರ್ಯದ ನಡಾವಳಿಗಳು ಸಹಿಸಲಾರದಷ್ಟು ಅಸಹನೀಯವಾಗುತ್ತವೆ. ಜನತೆಯ ಸ್ವಾತಂತ್ರ್ಯದ ನದಿಗಳಿಗೆ ಅರಸರೇ ತಡೆಗೋಡೆಗಳು. ಅಂತಹ ಸಮಯದಲ್ಲೇ ಚಿಂತಕರು, ತತ್ತ್ವಜ್ಞಾನಿಗಳು ಸೊಬಗಿನ ಸಮಾಜವನ್ನು ಸಮತೋಲನದಲ್ಲಿಡಲು ವಿವೇಕದ ಮಾರ್ಗಗಳನ್ನು ಭೂಪರಿಗೆ ತಿಳಿಯಹೇಳುತ್ತಿರುತ್ತಾರೆ. ಪಂಪ ತನ್ನ ಕಾವ್ಯದಲ್ಲಿ ‘ನಿಜದೊಳೆ ಭೂಪರೆಂಬರವಿವೇಕಿಗಳ್…’ ಎಂದು ಅಶ್ವತ್ಥಾಮನ ಮೂಲಕ ಹೇಳಿದ್ದಾನೆ. ಜಗತ್ತಿನ ಬಹುಪಾಲು ರಾಜರ ಆಳ್ವಿಕೆಯನ್ನು ಚರಿತ್ರೆಯಲ್ಲಿ ಓದಿದಾಗ ಇದೊಂದು ಸಾರ್ವಕಾಲಿಕ ವಿವೇಕದ ನುಡಿಯೆನ್ನುವುದು ನಿಜವಾಗಿದೆ.

ಬೌದ್ಧ ‘ಮಹಾಯಾನ’ದ ತಾತ್ವಿಕತೆಯ ಮಹಾದಾರ್ಶನಿಕ ನಾಗರ್ಜುನ, ತನ್ನ ತತ್ವದರ್ಶನದ ನಡುವೆಯೇ ಆತ ‘ರಾಜಪರಿಕಥಾ ರತ್ನಾವಳಿ’ ಎನ್ನುವ ರಾಜನೀತಿಯ ಕೃತಿಯೊಂದನ್ನು ರಚಿಸಿದ (ಬೌದ್ಧಧರ್ಮದ ರಾಜನೀತಿ: ಕನ್ನಡಕ್ಕೆ: ಎಸ್. ನಟರಾಜ ಬೂದಾಳು). ಬಹುಪಾಲು ನಾಗಾರ್ಜುನನ ಸಮಕಾಲೀನ ತಿರುವಳ್ಳುವರ್ ಅವರ ‘ತಿರುಕ್ಕುರುಳ್’ ಕೂಡ ಬಂದದ್ದು ಇದೇ ಕಾಲಘಟ್ಟದಲ್ಲಿ. ಈ ಇಬ್ಬರೂ ದಾರ್ಶನಿಕರು ರಾಜರುಗಳ ಕರ್ತವ್ಯಗಳನ್ನು ವಿವರಿಸಿದ್ದಾರೆ.

‘ಜನರು ಸಂಕಟವನ್ನು ಸಹಿಸಲಾರದೆ ಅತ್ತು ಸುರಿಸುವ ಕಣ್ಣೀರೇ ರಾಜನ ಸಂಪತ್ತನ್ನು ಸವೆಸಿ ನಾಶಗೊಳಿಸುವ ಆಯುಧವಾಗುತ್ತದೆ’ ತಿರುಕ್ಕುರುಳ್‌ನ ಈ ಮಾತುಗಳು, ರಾಜರ ಬರ್ಬರ ಆಳ್ವಿಕೆಯನ್ನು ಕಟುವಾಗಿ ಹೇಳುತ್ತದೆ. ‘ಕುರುಡರು, ರೋಗಿಗಳು, ದುರ್ಬಲರು, ದೀನರು, ಭಿಕ್ಷುಕರು… ಮುಂತಾಗಿ ಯಾರಿಗೂ ದೇವಾಲಯ ಪ್ರವೇಶವನ್ನು ನಿರಾಕರಿಸಬಾರದು. ದಾಸೋಹಗಳಲ್ಲಿ ಅವರಿಗೆ ತಾರತಮ್ಯವಾಗದಂತೆ ನೋಡಿಕೊ’ ಎಂದು ನಾಗಾರ್ಜುನ ತನ್ನ ರಾಜನೀತಿಯಲ್ಲಿ ಹೇಳುತ್ತಾನೆ. ‘ಈ ರಾಜ್ಯವನ್ನು ನೀನೇನು ಪರಲೋಕದಿಂದ ತಂದಿಲ್ಲ/ ತಗೆದುಕೊಂಡೂ ಹೋಗುವುದಿಲ್ಲ/ ಧರ್ಮವಶಾತ್ ನಿನಗೆ ಇದು ಪ್ರಾಪ್ತವಾಗಿರುವುದರಿಂದ/ ಧರ್ಮವನ್ನು ಮೀರಿ ನಡೆಯಲಾಗದು’. ಹೀಗೆ ಬೌದ್ಧ ದರ್ಶನ ತೋರಿದ ಲೋಕಕಾರುಣ್ಯದ ದಾರಿಯಲ್ಲಿಯೇ ನಾಗಾರ್ಜುನನ ‘ರಾಜನೀತಿ’ ಪ್ರಕಟವಾಗಿರುವುದು ವಿಶೇಷ. ‘ಚಕ್ರವರ್ತಿಯೊಬ್ಬ ನಾಲ್ಕು ಖಂಡಗಳನ್ನು ಆಳಿದರೂ ಅದರಿಂದ ದೊರಕುವ ಸಂತೋಷ ಎರಡೇ, ಒಂದು ದೈಹಿಕ, ಇನ್ನೊಂದು ಮಾನಸಿಕ’. ಎರಡು ಸಾವಿರ ವರ್ಷಗಳ ಹಿಂದೆಯೇ ನಾಗಾರ್ಜುನ ಹೇಳಿರುವ ಈ ಮಾತುಗಳು, ಪ್ರಜೆಗಳ ಹಿತವನ್ನು ಕಡೆಗಣಿಸಿ, ಕೀರ್ತಿ ಮತ್ತು ಸಂಪತ್ತನ್ನು ನೂರ್ಮಡಿಗೊಳಿಸಿಕೊಳ್ಳಲು ತಮ್ಮ ಸೇನಾಬಲವನ್ನು ಮೀಸಲಿರಿಸುವ ದೊರೆಗಳ ಅವಿವೇಕ ನಡೆಯನ್ನು ಖಂಡಿಸುತ್ತದೆ.

‘ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬವರಿಲ್ಲ…’ ಎಂದು 12ನೇ ಶತಮಾನದಲ್ಲೇ ಬಸವಣ್ಣ, ಪ್ರಜೆಗಳ ಹಿತ ಬಯಸದ ರಾಜ ಮತ್ತು ಅವರ ಕುರುಡು ಅಧಿಕಾರಶಾಹಿಯನ್ನು ನೇರ ಲೇವಡಿ ಮಾಡಿದ್ದಾನೆ. ಕುಮಾರವ್ಯಾಸನಂತೂ ‘ಅರಸು ರಾಕ್ಷಸ ಮಂತ್ರಿಯೆಂಬುವ, ಮೊರೆವ ಹುಲಿ ಪರಿವಾರ ಹದ್ದಿನ, ನೆರವಿ ಬಡವರ ಬಿನ್ನಪವನ್ನಾರು ಕೇಳುವರು…’ ಎಂದು ದನಿಯಿಲ್ಲದ ಅಸಹಾಯಕರ ಪರವಾಗಿ ಮಾತನಾಡುತ್ತಾನೆ. ಹೀಗೆ ಕವಿಗಳು ಮತ್ತು ದಾರ್ಶನಿಕರು ತಮ್ಮ ಕಾಲದ ಪ್ರಭುತ್ವವನ್ನು ಧರ್ಮದ ದಾರಿಗೆ ತರುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾರೆ. ಕ್ರಿ.ಶ. 6ನೇ ಶತಮಾನದಲ್ಲಿ ಚೀನಾದಲ್ಲಿ ಬದುಕಿದ್ದ ತತ್ತ್ವಜ್ಞಾನಿ ಲಾವ್ ತ್ಸು ದಾವ್ ದ ಜಿಂಗ್ ತನ್ನ ಸೂತ್ರಗಳಲ್ಲಿ ‘ನಿಷೇಧಗಳನ್ನು ಹೇರಿದಷ್ಟೂ ಜನ ದರಿದ್ರರಾಗುತ್ತಾರೆ, ಜನ ದರಿದ್ರರಾದಷ್ಟೂ ಅವರ ಆಯುಧಗಳು ಹರಿತವಾಗುತ್ತವೆ, ಸಾಮ್ರಾಜ್ಯಗಳು ಕತ್ತಲೆಗೆ ಸಂದಷ್ಟೂ, ಆಕರ್ಷಕ ಯೋಜನೆ ಜಾರಿಯಾಗುತ್ತದೆ…’ ‘ತೆರಿಗೆ ಹೊರೆ ಜಾಸ್ತಿಯಾದಾಗ, ಸಾಮಾನ್ಯ ಜನ ಹಸಿವಿನಿಂದ ನರಳುತ್ತಾರೆ. ಅಧಿಕಾರಸ್ಥರು ಅತಿಯಾಗಿ ನಿರ್ಭಂದಿಸಿದರೆ ಜನ ತಿರುಗಿ ಬೀಳುತ್ತಾರೆ…’ (ದಾವ್ ದ ಜಿಂಗ್ ಸೂತ್ರಗಳು ಕನ್ನಡಕ್ಕೆ: ಎಸ್ ನಟರಾಜ ಬೂದಾಳು) ಎಂದು ಹೇಳುತ್ತಾನೆ. ಇಂತಹ ಚಿಂತನೆಗಳು ಆಳುವವರ ಹೃದಯದಲ್ಲಿ ಇಲ್ಲದಿದ್ದರೆ, ಅಲ್ಲಿನ ಸಮಾಜಗಳು ಚೈತನ್ಯ ಶೂನ್ಯತೆಯಿಂದ ಬಳಲುತ್ತವೆ. ದಾವ್ ದ ಜಿಂಗ್ ಹೇಳುತ್ತಾನೆ ‘ಕರುಣೆ ಎಲ್ಲ ಯುದ್ಧಗಳನ್ನು ಗೆಲ್ಲುತ್ತದೆ, ಎಲ್ಲ ಆಕ್ರಮಣಗಳನ್ನು ತಡೆಯುತ್ತದೆ…’

13ನೇ ಶತಮಾನದಲ್ಲಿ ಬದುಕಿದ್ದ ಎಂದು ಹೇಳಲಾಗುವ ತತ್ತ್ವಜ್ಞಾನಿ, ಹಾಸ್ಯಗಾರ ಮುಲ್ಲಾ ನಸ್ರುದ್ದೀನ್ ಅವರನ್ನು ಒಮ್ಮೆ ‘ನನ್ನ ನಿಜವಾದ ಬೆಲೆಯೇನು’ ಎಂದು ದೊರೆ ಕೇಳಿದ. ದೊರೆಯನ್ನು ಒಮ್ಮೆ ಆಪಾದಮಸ್ತಕ ನೋಡಿ ನಸ್ರುದ್ದೀನ್ ‘ಇಪ್ಪತ್ತು ಬಂಗಾರದ ನಾಣ್ಯಗಳು’ ಎಂದು ಹೇಳಿದ. ‘ಅಲ್ಲಯ್ಯಾ, ನನ್ನ ಸೊಂಟ ಪಟ್ಟಿಯ ಬೆಲೆಯೇ ಇಪ್ಪತ್ತು ಬಂಗಾರದ ನಾಣ್ಯಗಳು. ನೀನು ಬೆಲೆ ಕಟ್ಟುವಾಗ ಇದನ್ನೂ ಸೇರಿಸಿಕೊಂಡೆಯಾ?’ ಎಂದು ದೊರೆ ಕೇಳಿದ. ‘ನಿಮಗೆ ಬೆಲೆಯನ್ನು ಕಟ್ಟುವಾಗ ಅದನ್ನೂ ಲೆಕ್ಕಕ್ಕೆ ತಗೆದುಕೊಂಡಿದ್ದೇನೆ ಹುಜೂರ್’ ಎಂದು ನಸ್ರುದ್ದೀನ್ ಹೇಳಿದ. ನವಾಬರ ಅಧಿಕಾರ ಮತ್ತು ಸಂಪತ್ತಿನ ನಶ್ವರತೆಯನ್ನು ಮುಲ್ಲಾ ನಸ್ರುದ್ದೀನ್ ತಣ್ಣಗೆ ಛೇಡಿಸಿದ.

ಬಿಂಬಿಸಾರ ಬುದ್ಧದೇವನ ಬಳಿಗೆ ಬಂದು ಪ್ರಜೆಗಳು ನೆಮ್ಮದಿಯಿಂದ ಇರಲು ಏನು ಮಾಡಬೇಕು ಎಂದು ಕೇಳಿದ. ಅವನ ಪ್ರಶ್ನೆಗೆ ಬುದ್ಧದೇವನ ಉತ್ತರ ಹೀಗಿತ್ತು ‘ರಾಜ್ಯ ಸುಭಿಕ್ಷವಾಗಿರಲು ಯಜ್ಞ–ಯಾಗಾದಿಗಳನ್ನು ಮಾಡಿದರೆ ಪ್ರಯೋಜನವಿಲ್ಲ. ಬಲಪ್ರಯೋಗದ ಮೂಲಕ ಕಳ್ಳತನ, ದರೋಡೆಗಳನ್ನು ತಡೆಯಲಾಗದು! ಹಾಗೆಯೇ ದಾನ ಧರ್ಮ ಮಾಡಲೂ ಪ್ರಚೋದಿಸಬಾರದು. ಏಕೆಂದರೆ, ಅನ್ಯಾಯದ ಗಳಿಕೆಯೇ ದಾನ ಧರ್ಮಕ್ಕೆ ಪ್ರೇರಣೆಯಾಗುತ್ತದೆ. ಇದಕ್ಕೆಲ್ಲಾ ಕಾರಣ ಬಡತನ. ಆದ್ದರಿಂದ ರೈತರಿಗೆ ಬಿತ್ತನೆ ಬೀಜಗಳನ್ನು ನೀಡು. ವರ್ತಕರಿಗೆ ಬಂಡವಾಳ, ಕುಶಲಕರ್ಮಿಗಳಿಗೆ ಕೆಲಸ ನೀಡು. ಇದರಿಂದ ಯಾರೂ ಯಾರಮೇಲೂ ತಿರುಗಿ ಬೀಳುವುದಿಲ್ಲ. ಮತ್ತೊಬ್ಬರ ಸಂಪತ್ತನ್ನು ದೋಚುವುದಿಲ್ಲ’ ಎಂದು ಕರುಣೆಯ ಸಮರೂಪತೆಗಳನ್ನು ಹೇಳಿದ.

‘ಪರಮತಗಳ ಪೀಠಗಳು, ಹಿಂದಿನ ರಾಜರುಗಳು ಸ್ಥಾಪಿಸಿದ/ ದೇವಾಲಯಗಳು ಇತ್ಯಾದಿಗಳನ್ನು ಸಮಾನ ಆದರದಿಂದ ಕಾಣು/ ಎಲ್ಲಾ ಶ್ರದ್ಧಾಕೇಂದ್ರಗಳ ಯಥಾಸ್ಥಿತಿಯನ್ನು ಕಾಪಾಡು’. ‘ರಾಜವೃಕ್ಷವು ಸನ್ಮಾನದ ಹೂಗಳನ್ನು ಅರಳಿಸಿದರೆ/ ಸಹನಶೀಲತೆ ನೆರಳನ್ನು ನೀಡಿದರೆ, ದಾನಶೀಲತೆಯಿಂದ/ ಪಕ್ವವಾದ ಹಣ್ಣುಗಳು ಬಿಟ್ಟರೆ, ಭೃತ್ಯರೆಂಬ ಹಕ್ಕಿಪಕ್ಷಿಗಳೆಲ್ಲ ಬಂದು/ ಅಲ್ಲಿ ನೆಲೆಸುತ್ತವೆ’ (ನಾಗಾರ್ಜುನ). ಇಂತಹ ಕ್ರಿಯಾರೂಪದ ಚಿಂತನೆಗಳು ಜಗತ್ತಿನ ಬಹುತ್ವದ ನಿರ್ಮೂಲನೆಗೆ ಅವಕಾಶ ಕೊಡುವುದಿಲ್ಲ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ದೇವರನ್ನು ನೋಡಬೇಕಾದುದು ಪ್ರೀತಿಯ ರೂಪದಲ್ಲಿ; ಮಂದಿರ ಮಸೀದಿಯ ರೂಪದಲ್ಲಲ್ಲ.

  —ಕಬೀರ

- ದೇಶ ಭ್ರಷ್ಟಾಚಾರ ಮುಕ್ತವಾದರೆ ಅಲ್ಲಿ ಸುಂದರ ಚಿಂತನೆ ಕಾಣಬಹುದು. ಸಮಾಜವನ್ನು ತಂದೆ, ತಾಯಿ, ಗುರು ಕಟ್ಟುತ್ತಾರೆ.

  —ಅಬ್ದುಲ್ ಕಲಾಂ

- ಶ್ರೇಷ್ಠ ಸತ್ಯವೆಂದರೆ ಪ್ರಾಮಾಣಿಕತೆ. ಅತಿದೊಡ್ಡ ಸುಳ್ಳೆಂದರೆ ಅಪ್ರಾಮಾಣಿಕತೆ.

  —ಖಲೀಫಾ ಅಬೂಬಕರ್

- ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು?

  —ಬಸವಣ್ಣ

- ನಮ್ಮ ಬೌದ್ಧಿಕ ಸೌಂದರ್ಯವೇ ನಿಜಕ್ಕೂ ಎಲ್ಲ ಬಗೆಯ ಸೌಂದರ್ಯಗಳನ್ನು ಮೀರಿಸುವಂತೆ ಕಂಗೊಳಿಸುವುದು.

  —ಸಿ.ವಿ. ರಾಮನ್

- ಪ್ರೀತಿಯನ್ನು ಯಾರು ಬಯಸುತ್ತಾರೋ ಅವರು ಮೊದಲು ಪ್ರೀತಿಯನ್ನು ನೀಡುವುದನ್ನು ಕಲಿಯಬೇಕು.

  —ಕಬೀರ